ಇ) ಹಿಪ್ಪುನೇರಳೆಗೆ ಸಂಬಂಧಿಸಿದಂತೆ ಸಂಸ್ಥೆಯಿಂದ ಮೂರು ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ಅವುಗಳೆಂದರೆ,

1) ವಿಶ್ವ (ಡಿ.ಡಿ) 2) ವಿಶಾಲ, 3) ಟಿ.ಜಿ.

ಈ ತಳಿಗಳನ್ನು ಕ್ಷೇತ್ರಮಟ್ಟದಲ್ಲಿ ರೇಷ್ಮೆ ಕೃಷಿಕರು ಅಳವಡಿಸಿಕೊಂಡಿರುತ್ತಾರೆ.

ರೇಷ್ಮೆ ಹುಳು ಸಾಕಾಣಿಕೆಗೆ ಸಂಬಂಧಿಸಿದಂತೆ ಸಂಸ್ಥೆಯಿಂದ ಈ ಕೆಳಕಂಡ ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ಇವುಗಳು ಕ್ಷೇತ್ರಮಟ್ಟದಲ್ಲಿ ಉತ್ತಮ ಫಲಿತಾಂಶಗಳನ್ನು ಕೊಡುತ್ತಿವೆ.

ಅ) ಎನ್‌ಪಿ 2 x ಕೆಎಸ್‌ಟಿ 01 : ಸಂಕರಣ ದ್ವಿತಳಿ

ಆ) ಎನ್‌ಟಿಸಿಎಂ x ಸಿಟಿಎಂ : ಸಂಕರಣ ದ್ವಿತಳಿ

ಇ) ಎಂಹೆಚ್ 1 : ಮಲ್ಟಿವೋಲ್ಟೈನ್

ಈ) ಪಿಎಂ ಣ ಸಿಎನ್2 : ಮಿಶ್ರತಳಿ

ಉ) ಎಸ್‌ಎಲ್‌ಕೆಎಸ್‌ಪಿಎಂ ಎನ್‌ಬಿ4ಡಿ2 : ಸೆಕ್ಸ್ ಲಿಮಿಟೆಡ್ ಹೈಬ್ರಿಡ್ ಕಾಂಬಿನೇಷನ್

ಹಿಂದುಳಿದ ವರ್ಗದ ಹೊಲಿಗೆ ತರಬೇತುದಾರರಿಗೆ ಸ್ಕಾಲರ್‌ಷಿಪ್

4756 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗದವರಿಗೆ ಹೊಲಿಗೆ ತರಬೇತಿಯವರಿಗೆ ತಿಂಗಳಿಗೆ ಎಷ್ಟು ಹಣವನ್ನು ಸ್ಕಾಲರ್‌ಷಿಪ್ ಆಗಿ ಕೊಡಲಾಗುತ್ತಿದೆ?

ಆ) ಎಸ್.ಸಿ./ಎಸ್‌ಟಿ ವರ್ಗದವರಿಗೆ ಹೊಲಿಗೆ ತರಬೇತಿದಾರರಿಗೆ ಯಾವ ಪ್ರಮಾಣದಲ್ಲಿ ಸ್ಕಾಲರ್‌ಷಿಪ್ ಕೊಡಲಾಗುತ್ತಿದೆ?

ಇ) ಎಸ್.ಸಿ/ಎಸ್.ಟಿ ವರ್ಗದವರಿಗೆ ಪೋಸ್ಟ್ ಮೆಟ್ರಿಕ್ ಮತ್ತು ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳಿಗೆ ಒಬ್ಬ ವಿದ್ಯಾರ್ಥಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗುತ್ತಿದೆ?

ಈ) ಇದರಂತೆ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಹಾಸ್ಟೆಲ್‌ಗಳಿಗೆ ಒಬ್ಬ ವಿದ್ಯಾರ್ಥಿಗ ಯಾವ ಪ್ರಮಾಣದಲ್ಲಿ ಹಣ ಕೊಡಲಾಗುತ್ತಿದೆ?

ಉ) ಇದರಲ್ಲಿ, ವ್ಯತ್ಯಾಸವಿದ್ದರೆ ಇದಕ್ಕೆ ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಹೊಲಿಗೆ

ತರಬೇತಿ ಕೇಂದ್ರಗಳಲ್ಲಿನ ವಿದ್ಯಾರ್ಥಿಗಳಿಗೆ ತಿಂಗಳಿಗೆ ನೀಡುತ್ತಿರುವ ಸ್ಕಾಲರ್‌ಷಿಪ್ ವಿವರ :

ಪರಿಶಿಷ್ಟ ಜಾತಿ	*ಪರಿಶಿಷ್ಟ ವರ್ಗ*	*ಹಿಂದುಳಿದ ವರ್ಗ*
150 ರೂ.	150 ರೂ.	300 ರೂ.

ಇ) ಮತ್ತು ಈ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಭೋಜನಾ ವೆಚ್ಚದ ವಿವರ :

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರು
ಮೆಟ್ರಿಕ್ ಪೂರ್ವ	400	400	400
ಮೆಟ್ರಿಕ್ ನಂತರ	450	450	450

ಉ) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಭೋಜನಾ ವೆಚ್ಚದಲ್ಲಿ ವ್ಯತ್ಯಾಸ ಇರುವುದಿಲ್ಲ. ಆದರೆ ಹೊಲಿಗೆ ತರಬೇತಿದಾರರಿಗೆ ನೀಡುವ ಸ್ಟೈಫೆಂಡಿನಲ್ಲಿ ವ್ಯತ್ಯಾಸವಿದ್ದು ಇದನ್ನು ಸರಿಪಡಿಸಬೇಕೆಂಬ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಕೈಗಾರಿಕಾ ಶೆಡ್ಡುಗಳ ವಿತರಣೆ

4757 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಡಾ: ಅಂಬೇಡ್ಕರ್ ರವರ 100 ವರ್ಷದ ಜನ್ಮ ದಿನಾಚರಣೆ ಅಂಗವಾಗಿ ಕೈಗಾರಿಕಾ ಶೆಡ್ಡುಗಳನ್ನು ಶೇಕಡ 40 ಸಬ್ಸಿಡಿ ಕೊಡುವ ನಿಯಮಾವಳಿ ಪ್ರಕಾರ ಹಂಚಲಾಗಿದೆಯೇ?*

ಆ) *ಹಾಗಿದ್ದಲ್ಲಿ ಈ ಯೋಜನೆಯಂತೆ ಹಂಚಲಾದ ಶೆಡ್ಡುಗಳ ಸಂಖ್ಯೆ ಎಷ್ಟು? ಹಾಗೂ ಯಾವ ಯಾವ ಜಿಲ್ಲೆಗಳಲ್ಲಿ ಹಂಚಾಲಾಗಿದೆ?*

ಇ) *ಇವರಿಗೆ ಕೊಡುವ ಶೇಕಡ40 ಸಹಾಯದ ಹಣ ಸರ್ಕಾರದಿಂದ ವಿತರಣೆ ಆಗಿದೆಯೇ?*

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಹೌದು.